<u>ಸಾಕ್ಷಿಯನ್ನು ದಿನಾಂಕಃ 30-05-2019 ರಂದು ಕರೆಯಿಸಿ ಪ್ರಮಾಣ ವಚನ ನೀಡಲಾಯಿತು.</u>

<u>ಪಾಟೀಸವಾಲು ಪ್ರತಿವಾದಿ ಪರ ವಕೀಲರಾದ ಶ್ರೀ ಕೆ.ಜೆ.ಪಿ. ರವರಿಂದಃ</u>

ನಾವು ಒಡಹುಟ್ಟಿದವರು ನಾಲ್ಕು ಜನ. ಅವರುಗಳೆಂದರೆ ಮಾಬು ಸಾಬ್ , ರೆಹಮಾನ್ ಸಾಬ್, ಮನ್ಸೂರ್ ಮತ್ತು ನಾನು. ದಾವಾ ಆಸ್ತಿಯ ಮೂಲ ಮಾಲೀಕರು ನನ್ನ ತಂದೆಯವರು. ನನ್ನ ತಂದೆಯವರು ಮರಣ ಹೊಂದಿ 15 ವರ್ಷಗಳಾಗಿರುತ್ತದೆ. ನನ್ನ ತಂದೆಯವರು ಜೀವಂತ ಇದ್ದಾಗ ಆಸ್ತಿಯನ್ನು ಪಾಲುವಿಭಾಗ ಮಾಡಿ ಕೊಟ್ಟಿರುತ್ತಾರೆ. ಸದರಿ ಪಾಲುವಿಭಾಗದಲ್ಲಿ ದಾವಾ ಆಸ್ತಿಯು ನನ್ನ ಅಣ್ಣ ಮನ್ಸೂರವರ ಹಿಸ್ಸೆಗೆ ಬಂದಿರುತ್ತದೆ. ಪಾಲುವಿಭಾಗ ಮಾಡಿಕೊಂಡ ಸಂದರ್ಭದಲ್ಲಿ ನಾವುಗಳು ಅದಲಿ ಬದಲಿ ಪತ್ರ, ಹಕ್ಕು ಬಿಡುಗಡೆ ಪತ್ರ ಅಥವಾ ದಾನಪತ್ರ ಇವುಗಳನ್ನು ಮಾಡಿಕೊಂಡಿಲ್ಲ. ದಾವಾ ಆಸ್ತಿಯು ಹಾಲಿ ನನ್ನ ಅಣ್ಣನ ಹೆಂಡತಿ ಅತ್ತಿಗೆಯ ಹೆಸರಿನಲ್ಲಿ ಇದೆ . ಯಾವ ದಾಖಲೆಯನ್ನು ನೋಡಿ ನಿಮ್ಮ ಅತ್ತಿಗೆಯ ಹೆಸರಿನಲ್ಲಿ ಇದೆ ಎಂದು ಹೇಳುತ್ತಿದ್ದೀರಿ ಎನ್ನುವ ಪ್ರಶ್ನೆಗೆ ಸಾಕ್ಷಿಯು ನನ್ನ ಅತ್ತಿಗೆಯ ಹೆಸರಿಗೆ ದಾನಪತ್ರವನ್ನು ಮಾಡಿಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಹರಪನಹಳ್ಳಿಯ 4 ನೇ ವಾರ್ಡಿನಲ್ಲಿ ದಿಃ 23.-06-2006 ರಲ್ಲಿ ಮುಸ್ಲಿಂ ಮೈನಾರಿಟಿ ಎಜುಕೇಷನಲ್ ಅಂಡ್ ವೆಲ್‌ಫೇರ್ ಸೊಸೈಟಿಯನ್ನು ತೆರೆದು ಅದರಲ್ಲಿ ಶಾಲೆಯನ್ನು ನಡೆಸುತ್ತಿದ್ದಾರೆ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ಅದರಲ್ಲಿ ಡಿ. ಅಬ್ದುಲ್ ಹಫೀಜ್ ಎನ್ನುವವರು ಅಧ್ಯಕ್ಷರಾಗಿದ್ದು 11 ಜನ ಸದಸ್ಯರಿರುತ್ತಾರೆ ಎನ್ನುವ ವಿಷಯ ಗೊತ್ತಿದ್ದರೂ ಸಹ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಸದರಿ ಶಾಲೆಯು ಬಾಡಿಗೆ ಕಟ್ಟಡದಲ್ಲಿ ದಿಃ 30-10-2006 ರವರೆಗೆ ನಡೆಯುತ್ತಿತ್ತು ಎಂದರೆ ಸರಿಯಲ್ಲ.

2. ಸದರಿ ಸೊಸೈಟಿಗೆ ಪಕ್ಕಾ ಬಿಲ್ಡಿಂಗನ್ನು ಕಟ್ಟಬೇಕೆಂಬ ಉದ್ದೇಶದಿಂದ ದಿನಾಂಕಃ 30-10-2006 ರಲ್ಲಿ ವಾದಿಯ ಗಂಡ ದಾವಾ ಆಸ್ತಿಯನ್ನು ಮಾರಾಟ ಮಾಡಿ, ಅಗ್ರಿಮೆಂಟ್ ಆಗಿರುತ್ತದೆ ಎಂದರೆ ಸಾಕ್ಷಿಯು ಎಲ್ಲಾ ಸುಳ್ಳು ಸದರಿ ಆಸ್ತಿಯು ನನ್ನ ಅತ್ತಿಗೆಯ ಸ್ವಾಧೀನದಲ್ಲಿದೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಯನ್ನು 1,10,000/- ರೂ.ಗಳಿಗೆ ಮಾರಾಟ ಮಾಡಿ 10,000/- ರೂ.ಗಳನ್ನು ಅದೇ ದಿನ ತೆಗೆದುಕೊಂಡು ಕರಾರುಪತ್ರವನ್ನು ಬರೆದುಕೊಟ್ಟಿರುತ್ತಾರೆಂದರೆ ಸರಿಯಲ್ಲ ಸದರಿ ಕರಾರುಪತ್ರಕ್ಕೆ ವಾದಿಯ ಗಂಡ ಹೆಬ್ಬೆಟ್ಟಿನ ಗುರುತನ್ನು ಹಾಕಿರುತ್ತಾನೆಂದರೆ ಸರಿಯಲ್ಲ. ಸದರಿ ಪತ್ರಕ್ಕೆ ವಾದಿಯೂ ಸಹ ಹೆಬ್ಬೆಟ್ಟಿನ ಗುರುತನ್ನು ಹಾಕಿರುತ್ತಾರೆಂದರೆ ಸರಿಯಲ್ಲ. ಸದರಿ ಪತ್ರಕ್ಕೆ ಜಿ ಮೆಹಬೂಬ್ ಸಾಬ್, ಎಸ್.ಎಂ.. ಫಾರೂಕ್ ಮತ್ತು ಡಿ.ಎಂ. ಯೂನಸ್ರವರುಗಳು ಸಹಿ ಮಾಡಿರುತ್ತಾರೆಂದರೆ ಸರಿಯಲ್ಲ. ಸದರಿ ಪತ್ರವನ್ನು ಬರೆದಂತಹ ಇಮ್ರಾನ್‌ರವರು ಇನ್ನೂ ಜೀವಂತವಿದ್ದು ಆತನು ಸಹ ಸಹಿ ಮಾಡಿರುತ್ತಾನೆಂದರೆ ಸರಿಯಲ್ಲ. ಮುಸ್ಲಿಂ ಮೈನಾರಿಟಿ

ಎಜುಕೇಷನಲ್ ಅಂಡ್ ವೆಲ್‌ಫೇರ್ ಸೊಸೈಟಿಯ ಅಧ್ಯಕ್ಷರ ಸ್ವಾಧೀನಕ್ಕೆ ಅದೇ ದಿನ ನಾನು , ವಾದಿ ಮತ್ತು ಆಕೆಯ ಗಂಡ ಬಿಟ್ಟುಕೊಟ್ಟಿರುತ್ತೇವೆಂದರೆ ಸರಿಯಲ್ಲ.

3. ಅಲ್ಲಿಂದ ಇಲ್ಲಿಯವರೆಗೆ ಸದರಿ ಸೊಸೈಟಿಯ ಅಡಿಯಲ್ಲಿ ಅಲ್ಲಿ ಶಾಲೆ ನಡೆಯುತ್ತಿದೆ ಎಂದರೆ ಸರಿಯಲ್ಲ. ದಿನಾಂಕಃ 07-03-2007 ರಂದು ವಾದಿಯ ಗಂಡ ಸದರಿ ಸೊಸೈಟಿಯ ಅಧ್ಯಕ್ಷರಿಂದ 62,000/- ರೂ.ಗಳನ್ನು ಪಡೆದು ಮತ್ತೊಂದು ಅಗ್ರಿಮೆಂಟನ್ನು ಬರೆದುಕೊಟ್ಟಿರುತ್ತಾರೆಂದರೆ ಸರಿಯಲ್ಲ. ಸದರಿ ಪತ್ರಕ್ಕೂ ಸಹ ವಾದಿಯು ತನ್ನ ಹೆಬ್ಬೆಟ್ಟಿನ ಗುರುತನ್ನು ಹಾಕಿರುತ್ತಾರೆಂದರೆ ಸರಿಯಲ್ಲ. ಸಾಕ್ಷಿದಾರರಾಗಿ ಡಿ.ಎಂ. ಯೂನಸ್ ಮತ್ತು ಕೆ.ಎಂ. ಉಮರವರು ಸಹಿ ಮಾಡಿರುತ್ತಾರೆಂದರೆ ಸರಿಯಲ್ಲ. ಸದರಿ ಪತ್ರವನ್ನು ಡಿ ಖಲಂದರವರು ಬರೆದಿದ್ದು ಅವರ ಸಹಿ ಇದೆ ಎಂದರೆ ಸರಿಯಲ್ಲ. ಪುನಃ 3.000 /- ರೂ.ಗಳನ್ನು ವಾದಿಯ ಗಂಡ ತೆಗೆದುಕೊಂಡು ಸದರಿ ಪತ್ರದಲ್ಲಿ ಷರಾ ಬರೆದುಕೊಟ್ಟಿರುತ್ತಾರೆಂದರೆ ಸರಿಯಲ್ಲ ದಿನಾಂಕಃ12-12-2009 ರಂದು ಪುನಃ ನನ್ನ ಅಣ್ಣ 5,000 ರೂ.ಗಳನ್ನು ಪಡೆದುಕೊಂಡು ಸೊಸೈಟಿಯ ಹೆಸರಿಗೆ ಕ್ರಯ ಕರಾರುಪತ್ರ ಬರೆದುಕೊಟ್ಟಿರುತ್ತಾರೆಂದರೆ ಸರಿಯಲ್ಲ. ದಿನಾಂಕಃ 20-04-2010 ರಂದು ಪುನಃ 40,000 ರೂ.ಗಳನ್ನು ನನ್ನ ಅಣ್ಣ ಸದರಿ ಸೊಸೈಟಿ ಅಧಕ್ಷರಿಂದ ಪಡೆದು ಇನ್ನೊಂದು ಕರಾರುಪತ್ರವನ್ನು ಬರೆದುಕೊಟ್ಟಿರುತ್ತಾನೆ ಎಂದರೆ ಸರಿಯಲ್ಲ. ಸದರಿ ಪತ್ರಕ್ಕೆ ನನ್ನ ಅಣ್ಣ ನಾನು , ಮೆಹಬೂಬ್ ಸಾಬ್ ಮತ್ತು ರೆಹಮಾನ್ ಸಾಬ್ ನಾಲ್ಕು ಜನರು ಸಹಿ ಮಾಡಿರುತ್ತೇವೆಂದರೆ ಸರಿಯಲ್ಲ. ನಾನು ಮತ್ತು ಅಣ್ಣಂದಿರು ಸದರಿ ಪತ್ರಕ್ಕೆ ಸಹಿ ಮಾಡಿದ್ದರೂ ಸಹ ಸಹಿ ಮಾಡಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಾವು ನಾಲ್ಕು ಜನ ಅಣ್ಣ ತಮ್ಮಂದಿರು ಹಾಗೂ ವಾದಿಯು ದಾವಾ ಆಸ್ತಿಯ ಸ್ವಾಧೀನವನ್ನು ದಿಃ 30-10-2006 ರಂದೇ ಸೊಸೈಟಿಯ ಸ್ವಾಧೀನಕ್ಕೆ ಕೊಟ್ಟಿರುವ ವಿಚಾರ ನನಗೆ ಗೊತ್ತಿದೆ ಎಂದರೆ ಸಾಕ್ಷಿಯು ಸ್ವಾಧೀನಕ್ಕೆ ಕೊಟ್ಟಿಲ್ಲ ಎಂದು ನುಡಿಯುತ್ತಾರೆ. ದಾವಾ ಆಸ್ತಿಯಲ್ಲಿ ಮಾರಾಟ ಮಾಡಿದಾಗಿನಿಂದ ನಾವು ಸದರಿ ಆಸ್ತಿಯ ಸ್ವಾಧೀನದಲ್ಲಿ ಇಲ್ಲ ಎಂದರೆ ಸರಿಯಲ್ಲ.

4. ದಾವಾ ಆಸ್ತಿಯನ್ನು ಮಾರಾಟ ಮಾಡಿದ್ದರೂ ಸಹ ಮೋಸದಿಂದ ನನ್ನ ಅತ್ತಿಗೆಯಾದ ವಾದಿಯ ಹೆಸರಿಗೆ ಹಕ್ಕು ಬದಲಾವಣೆ ಮಾಡಿಸಿರುತ್ತೇವೆಂದರೆ ಸರಿಯಲ್ಲ. ನಾವು ಮಾರಾಟ ಮಾಡಿ ಅಗ್ರಿಮೆಂಟ್ ಮಾಡಿ ಕೊಟ್ಟಿರುವುದರಿಂದ ದಾವಾ ಆಸ್ತಿ ನಮ್ಮ ಕೈ ತಪ್ಪಿ ಹೋಗಿ ಬಿಡುತ್ತದೆ ಎನ್ನುವ ಕಾರಣದಿಂದ ನಮ್ಮ ಅಣ್ಣ ತಮ್ಮಂದಿರು ಮತ್ತು ಅತ್ತಿಗೆ ಸೇರಿಕೊಂಡು ಸುಳ್ಳು ಪಾಲುವಿಭಾಗ ಪತ್ರವನ್ನು ಸೃಷ್ಠಿ ಮಾಡಿಕೊಂಡಿರುತ್ತೇವೆಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ಮಾರಾಟ ಮಾಡಿ ಬಂದ ಹಣವನ್ನು ನಾವು ಸಮಾನವಾಗಿ ಹಂಚಿಕೊಂಡಿರುತ್ತೇವೆಂದರೆ ಸರಿಯಲ್ಲ. ಸದರಿ ಸೊಸೈಟಿಯ ಅಧ್ಯಕ್ಷರು ನನ್ನ ಜೀವಂತ ಇರುವಾಗ ಕರಾರುಪತ್ರದ ಪ್ರಕಾರ ಕ್ರಯಪತ್ರ ನೋಂದಣಿ ಮಾಡಿಸಿಕೊಡಿ ಎಂದು ಕೇಳಿದಾಗ ನಾವುಗಳು ತಿರಸ್ಕಸಿರುತ್ತೇವೆಂದರೆ ಸರಿಯಲ್ಲ. ನಾವು ಮಾಡಿಕೊಂಡಂತಹ ಪಾಲುವಿಭಾಗ ಪತ್ರಕ್ಕೂ ದಾವಾ ಆಸ್ತಿಗೂ

ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆಯವರು ಮರಣ ಹೊಂದಿದ ನಂತರ ನಮ್ಮ ಮನೆಯ ಯಜನಮಾನಿಕೆಯನ್ನು ನನ್ನ ಅಣ್ಣ ಮಾಬುಸಾಬ್ ನೋಡಿಕೊಳ್ಳುತ್ತಿದ್ದ. ದಾವಾ ಆಸ್ತಿಯನ್ನು ಉಳಿಸಿಕೊಳ್ಳಬೇಕೆಂಬ ಉದ್ದೇಶದಿಂದ ನನ್ನ ಅಣ್ಣ ವಾದಿಯ ಹೆಸರಿಗೆ ಕಾನೂನು ಬಾಹಿರವಾದ ದಾನಪತ್ರವನ್ನು ಮಾಡಿಕೊಟ್ಟಿರುತ್ತಾನೆಂದರೆ ಸರಿಯಲ್ಲ.

5. ನನ್ನ ಅಣ್ಣನಿಗೆ ಆತನ ಹೆಂಡತಿಯ ಹೆಸರಿಗೆ ದಾನಪತ್ರವನ್ನು ಮಾಡಿಕೊಡಲು ಯಾವುದೇ ಹಕ್ಕು ಹಿತಾಸಕ್ತಿ ಇಲ್ಲ ಎಂದರೆ ಸರಿಯಲ್ಲ. ಮುಸ್ಲಿಂ ಮೈನಾರಿಟಿ ಎಜುಕೇಷನ್ ಅಂಡ್ ವೆಲ್‌ಫೇರ್ ಸೊಸೈಟಿಯ ಅಧ್ಯಕ್ಷ ಡಿ. ಅಬ್ದುಲ್ ಹಫೀಜ್ ಮತ್ತು ಪ್ರತಿವಾದಿಯು ಅಣ್ಣ -ತಮ್ಮಂದಿರಾಗಬೇಕು. ಹೇಗಾದರೂ ಮಾಡಿ ದಾವಾ ಆಸ್ತಿಯನ್ನು ಉಳಿಸಿಕೊಳ್ಳಬೇಕೆಂಬ ಉದ್ದೇಶದಿಂದ ನಾವು ಅಣ್ಣ ತಮ್ಮಂದಿರು ಹಾಗೂ ವಾದಿ ಸೇರಿ ಸದರಿ ಸೊಸೈಟಿಯ ಅಧ್ಯಕ್ಷರ ವಿರುದ್ಧ ದಾವೆಯನ್ನು ಸಲ್ಲಿಸುವ ಬದಲು ಪ್ರಸ್ತುತ ಪ್ರತಿವಾದಿಯ ವಿರುದ್ಧ ಸುಳ್ಳು ಕೇಸನ್ನು ಮಿಲಾಪಿಯಾಗಿ ಸಲ್ಲಿಸಿರುತ್ತೇವೆಂದರೆ ಸರಿಯಲ್ಲ. ಸೊಸೈಟಿಯ ಅಧ್ಯಕ್ಷರ ವಿರುದ್ಧ ಸಲ್ಲಿಸಿದರೇ ನಾವು ಬರೆದುಕೊಟ್ಟಿರುವ ಮೂರು ಕರಾರುಪತ್ರ ಸಾಬೀತಾಗುತ್ತದೆ ಎಂದು ಈ ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ಸೊಸೈಟಿಗೆ ಮಾರಾಟ ಮಾಡಿದ ನಂತರ ಮಾರ್ಕೆಟಿನಲ್ಲಿ ಸದರಿ ಆಸ್ತಿಗೆ ಹೆಚ್ಚಿನ ಬೆಲೆ ಬಂದಿದ್ದರಿಂದ ಈ ಸುಳ್ಳು ದಾವೆ ಸಲ್ಲಿಸಿರುತ್ತೇವೆಂದರೆ ಸರಿಯಲ್ಲ. ಸದರಿ ಕಾರಣದಿಂದ ನನ್ನ ಅತ್ತಿಗೆಯಾದ ವಾದಿಯ ಪರವಾಗಿ ಸುಳ್ಳು ಸಾಕ್ಷ್ಯ ಹೇಳಲು ಬಂದಿರುತ್ತೇನೆಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿಯಿದೆ.

ಸಿವಿಲ್ ನ್ಯಾಯಾಧೀಶರು ಮತ್ತು

ಜೆ.ಎಂ.ಎಫ್.ಸಿ. ಹರಪನಹಳ್ಳಿ